doc-554
T P-2

Reg No B G 155 3—10—72

In The State First Golden Jubilee Celebrated Paper 'Satyavadi' daily, Mysore 4

56th Year of Publication

★

News, Views, Dharmic
Moral Ethical Matters

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸ

ನೆಹರು ಲೋಕ ನಿರ್ಮಾಣದ ಬಗೆಗೆ ಸರಕಾರದ ಪರಿಶೀಲನ

ಉದ್ಯೋಗ

ಅಭಾವ ಪರಿಹಾರಕ್ಕಾಗಿ ಈಗ ರಾಜ್ಯದ ನಾನಾ ಭಾಗಗಳಲ್ಲಿ 3364 ಕಾಮಗಾರಿಗಳು ನಡೆಯುತ್ತಿದ್ದು 2.83 ಲಕ್ಷ ಜನರಿಗೆ ಉದ್ಯೋಗ ಒದಗಿಸಲಾಗಿದೆ; ಇದರ ಜೊತೆಗೆ ಸುಮಾರು 2.34 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗ ಕಲ್ಪಿಸುವ 4700 ನಾನಾ ಇತರ ಕಾಮಗಾರಿಗಳೂ ನಡೆಯುತ್ತಿವೆ ಎಂದು ಪ್ರಕಟವಾಗಿದೆ.

★

ದಸರಾ ಕಾರ್ಯಕ್ರಮ

ಸಾರಿಗೆ, ಕಾರ್ಮಿಕ ಮತ್ತು ಪ್ರವಾಸೋದ್ಯಮ ಸಚಿವ ಶ್ರೀ ಅಜೀಜ್ ಸೇಟ್ ರವರ ಅಧ್ಯಕ್ಷತೆಯಲ್ಲಿನ ದಸರಾ ಸಮಿತಿ ಸವಿಹರ ಕಾರ್ಯಕ್ರಮವೊಂದನ್ನು ಸಿದ್ಧಗೊಳಿಸಿದ್ದು, ದಸರಾ ವಸ್ತುಪ್ರದರ್ಶನ, ದಸರಾ ಮೆರವಣಿಗೆ, ಸಾಂಸ್ಕೃತಿಕ ಉತ್ಸವ ಚಲನಚಿತ್ರೋತ್ಸವ, ಕ್ರೀಡೋತ್ಸವ, ಪಂದ್ಯಾಟಗಳು ಹಾಗೂ ಇನ್ನಿತರ ಕಾರ್ಯಕ್ರಮಗಳು ಸೇರಿವೆಯೆಂದು ಪ್ರಕಟವಾಗಿದೆ.

★

ಅದ್ಭುತ ವಿಷಯ

ನವೆಂಬರ್ 15 ರಿಂದ ಮಡಕೇರಿಯಲ್ಲಿ ನಡೆಯಲಿರುವ ಸಾಹಿತ್ಯ ಪ್ರಚಾರ ಯೋಜನೆಯ ಬೃಹತ್ ಪುಸ್ತಕ ಪ್ರದರ್ಶನದಲ್ಲಿ 25 ಸಹಸ್ರ ರೂ. ಮೌಲ್ಯದ ಪುಸ್ತಕಗಳನ್ನು ಕೊಳ್ಳಲು ನಿರ್ಧರಿಸಲಾಗಿದೆಯೆಂದು ಕೊಡಗು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಗ್ರಂಥಾಲಯ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ. ರಾಮಕೃಷ್ಣರು ತಿಳಿಸಿರುವುದಾಗಿ ಪ್ರಕಟವಾಗಿದೆ.

●

ಗಾಂಧಿ ಜಯಂತಿ

ದೇಶಾದ್ಯಂತ ಸೋಮವಾರ ಗಾಂಧಿ ಜಯಂತಿ ಆಚರಿಸಲಾಯಿತು.

ನೆಹ್ರೂಲೋಕ

ಮೈಸೂರು — ಚಾಮುಂಡಿ ಬೆಟ್ಟದ ಪರಿಸರದಲ್ಲಿ ನೆಹ್ರೂಲೋಕ ನಿರ್ಮಿಸಲು ರಾಜ್ಯ ಸರಕಾರ ಪರಿಶೀಲಿಸುತ್ತಿದೆಯೆಂದು ಸೋಮವಾರ ಫಂಜೆ ಉದ್ಯಾನ ಕಲಾ ಸಂಘ ಏರ್ಪಡಿಸಿದ್ದ ಫಲಪುಷ್ಪ ಪ್ರದರ್ಶನದ ಬಹುಮಾನ ವಿನಿಯೋಗ ಸಮಾರಂಭದಲ್ಲಿ ರಾಜ್ಯದ ಕ್ಷೇಮಾಭಿವೃದ್ಧಿ ಮಂತ್ರಿ ಶ್ರೀ ಎಸ್. ಎಂ. ಕೃಷ್ಣರವರು ತಿಳಿಸಿದರು.

★

ಅಮೇರಿಕದಲ್ಲಿ ಕನ್ನಡ ಸಂಘ

ಬಾಲಟಿಮೋರ್—ವಾಷಿಂಗರ್ಟನ್ ಪ್ರಾಂತ್ಯದ ಕನ್ನಡಿಗರಿಗಾಗಿ ಬಾಲಟಿಮೋರ್‌ನಲ್ಲಿ ಕಾವೇರಿ ಕನ್ನಡ ಸಂಘ ಸ್ಥಾಪಿತವಾಗಿರುವುದೆಂದು ತಿಳಿಯಬಂದಿದೆ.

★

ಶ್ರೀಮನ್ಮಹಾರಾಜರು

ಶ್ರೀಮನ್ಮಹಾರಾಜರು ಶ್ರೀ ಜಯಚಾಮರಾಜ ಒಡೆಯರವರು ವಿದೇಶಗಳ ಪ್ರವಾಸ ಮುಗಿಸಿಕೊಂಡು ಶನಿವಾರ ಬೆಂಗಳೂರಿಗೆ ಬಂದರೆಂದು ಗೊತ್ತಾಗಿದೆ.

★

ವರ್ಗಾವಣೆಗಡೆ

ತಿರುವೆಂಡ್ರಂ— ನಾಯರ್ ಸೇವಾ ಸಂಘ ನೇಮಿಸಿರುವ 6 ಮಂದಿ ಉಪಾಧ್ಯಾಯರ ಆಂತರ- ಶ್ವವಿದ್ಯಾನಿಲಯ ವರ್ಗಾವಣೆಯನ್ನು ಕೆರಳಿ. ವಿಶ್ವವಿದ್ಯಾನಿಲಯದ ಸಿಂಡಿಕೇಟು ತಡೆದು, ತನ್ನ ಆಜ್ಞೆಯನ್ನು ಜಾರಿಗೆ ತರುವಂತೆ ಸರಕಾರಕ್ಕೆ ತಿಳಿಸಿದೆ.

●

ವರ್ಗಾವಣೆ

ಮೈಸೂರು ಪ್ರಾಣಿಸಂಗ್ರಹಾಲಯ ತೋಟದ ಅಡಳಿತವನ್ನು ಫಲಪುಷ್ಪ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ

ಭೀಕರ ಸ್ಫೋಟ

ಸ್ಯಾಕ್ರಾಮೆಂಟೊ— ಕಪ್ಪು ಕಡಲು ಅಗ್ನೇಯ ಭಾಗದಲ್ಲಿ ಅತಿಭಾರಿ ಭೂಗರ್ಭ ಸ್ಫೋಟವಾಯಿತೆಂದು ಉಪಗ್ರಹಾಲಾ ಅಬ್ಸರ್ವೇಟರಿಯಲ್ಲಿ ಗೊತ್ತಾಯಿತು.

★

ಉಪಾಧ್ಯಾಯರಿಂದ ಬಹಿಷ್ಕಾರ

ಮೈಸೂರು— ವಿಶ್ವವಿದ್ಯಾನಿಲಯಕ್ಕೆ ಸೇರಿದ ಖಾಸಗೀ ಕಾಲೇಜಿನ ಉಪಾಧ್ಯಾಯರು, ಆಕ್ಟೋಬರು—ನವೆಂಬರಿನಲ್ಲಿ ನಡೆಯುವ ವಿಶ್ವವಿದ್ಯಾನಿಲಯ ಮತ್ತು ಪಿ.ಸಿ.ಸಿ ಪರೀಕ್ಷೆಗಳನ್ನು ಬಹಿಷ್ಕರಿಸಲು ನಿರ್ಧರಿಸಿದ್ದಾರೆ

★

ಆತ್ಮಹತ್ಯೆಗಳು

ನವದೆಹಲಿ— ಆತ್ಮಹತ್ಯೆಗಳು ಹೆಚ್ಚಿದ್ದು, ಅನೇಕವು ವೈವಾಹಿಕ ಸಂಬಂಧವಾದುವೆಂದು ಪ್ರಕಟವಾಗಿದೆ.

★

ವಿದ್ಯಾರ್ಥಿಗಳ ವಿಷಯದಲ್ಲಿ

ಬೊಂಬಾಯಿ— 16 ವರ್ಷಕ್ಕೆ ಮುಂಚೆ ಹೈಸ್ಕೂಲು ಪರೀಕ್ಷೆಗೆ ಕೂತುಕೊಳ್ಳಲು ಯಾವ ವಿದ್ಯಾರ್ಥಿಗೂ ಅವಕಾಶಕೊಡಬಾರದೆಂದು ಗುಜರಾತು ಗೌರ್ನರ್ ಶ್ರೀಮನ್ನಾರಾಯಣರು ಹೇಳಿರುವರು — ಈಗ ಮೆಟ್ರಿಕ್ ಪರೀಕ್ಷೆಗೆ ಹೋಗಲು 13–14 ವರ್ಷದ ವಿದ್ಯಾರ್ಥಿಗಳಿಗೆ ಅವಕಾಶವಿರುವುದು ಅವರ ಆರೋಗ್ಯಕ್ಕೆ ಕೆಡಕೆಂದಿರುವರು.

★

ಶುಭ ಸೂಚನೆ

ಮೈಸೂರು ಜೂನಲ್ಲಿ ವನ್ಯ ಜೀವಿ ಸಪ್ತಾಹ ಸ್ಪಾರಂಭ ಸಮಾರಂಭವನ್ನು ಭಾನುವಾರ ನೆರವೇರಿಸಿದಾಗ ಅಲ್ಲಿನ ಫೌಂಡಾ ಮೃಗವು ಮರಿ ಹಾಕಿತು.

ಗಾಂಧಿಜಂ

ನವದೆಹಲಿ— ಮಹಾತ್ಮಾ ಗಾಂಧಿಯವರ ದೇಶವಾದ ಭಾರತದಲ್ಲಿ "ಗಾಂಧಿಜಂ ಅಸ್ಪೃಶ್ಯವಾಗಿದೆ; ಸರಕಾರವು ಈ ಬಗೆ ಅಲಕ್ಷಿಸಿದೆ — ಗಾಂಧೀಘಡ ಮತ್ತು ಮಧುರೈ, ಈ ಎರಡು ವಿಶ್ವವಿದ್ಯಾನಿಲಯಗಳಲ್ಲಿ ಮಾತ್ರ 'ಗಾಂಧೀಜಂ' ಪಾಠ ಪ್ರವಚನ ಏರ್ಪಾಡಿದ್ದು, ಡಿಪ್ಲೊಮಾ ಮತ್ತು ಸರ್ಟಿಫಿಕೇಟು ಕೊಡಲಾಗುತ್ತದೆ.

★

ಇದೊಂದು ವಿಚಿತ್ರ ವಿಷಯ

ರಾಯಪುರ— ಮಧ್ಯಪ್ರದೇಶದ ಮೈನಾ ಜಿಲ್ಲೆಯ ಕೊಲರಿಸ್‌ನಲ್ಲಿ 5 ವರ್ಷಗಳ ಹಿಂದೆ ರೂ. 2.62 ಕೋಟಿ ಖರ್ಚಿನಲ್ಲಿ ಸಕ್ಕರೆ ಗಿರಣಿ ಸ್ಥಾಪಿಸಲಾಯಿತು. 15 ದಿನಗಳ ಕಾಲ ಕೆಲಸ ನಡೆಸಲಾಯಿತು — ಗಿರಣಿ ಸ್ಥಾಪಿಸಿರುವವರು ಚಂಬಾಲ ನದಿಯಿಂದ ನೀರು ದೊರೆಯುವ ನಿರೀಕ್ಷೆ ಹೊಂದಿದ್ದರು — ಇದಕ್ಕೆ ಇನ್ನೂ 5 ವರ್ಷ ಬೇಕಾಗಿದೆ.

★

ಸರಕಾರದ ಆದಾಯ

ನವದೆಹಲಿ— 71–72ರಲ್ಲಿ ಆದಾಯ ಮತ್ತಿತರ ಕಾರ್ಪೊರೇಟ್ ತೆರಿಗೆಗಳು ರೂ. 1000 ಕೋಟಿಗೂ ಹೆಚ್ಚು ವಸೂಲಾಗಿದೆ – 72–73ರ ಪ್ರಥಮ 5 ತಿಂಗಳಲ್ಲಿ (ಏಪ್ರಿಲ್–ಆಗಸ್ಟ್) ರೂ. 263 ಕೋಟಿ ವಸೂಲಾಗಿದೆ.

★

ಆಸ್ಪತ್ರೆಯಲ್ಲಿ ಡಾಕ್ಟರುಗಳ ಅಭಾವ

ಸಕಲೇಶಪುರ— ಇಲ್ಲಿಯ ಕ್ರಾಫರ್ಡ್ ಆಸ್ಪತ್ರೆಯಲ್ಲಿ ಆರು ಡಾಕ್ಟರುಗಳಿರಬೇಕಾಗಿದ್ದರೂ ಕೇವಲ ಮೂರು ಮಂದಿ ವೈದ್ಯರಿದ್ದಾರೆ — ಮಹಿಳಾ ಡಾಕ್ಟರು ಇಲ್ಲವೆಂದು ಜನರಲ್ಲಿ ಕಳವಳ ಉಂಟುಮಾಡಿದೆ.

ವಿನೂತನ ಪೋಲೀಸು

ಜಪಾನಿನ ಕಾನಾಗ್ವಾ ಮತ್ತು ಸೈತಿಮಾಗಳಲ್ಲಿರುವ ರಸ್ತೆಜಂಕ್ಷನ್‌ಗಳಲ್ಲಿ ಮನುಷ್ಯಾಕೃತಿಯಲ್ಲಿರುವ ಗಾಜಿನ ಪೋಲೀಸರನ್ನು ಈಗ ಕಾಣಬಹುದು ; ಈ ನಿರ್ಜೀವ ಟ್ರಾಫಿಕ್ ಪೋಲೀಸರು 100 ಕಡೆಗಳಲ್ಲಿದ್ದಾರೆ ; ಈ ಮೂರ್ತಿಗಳಿಂದ ಅಪಘಾತಗಳ ಸಂಖ್ಯೆ ಕಡಮೆಯಾಗಿದೆ, ಎಂದು ಸ್ಥಳೀಯ ಆಡಳಿತಗಾರರು ಹೇಳಿದ್ದಾರೆ ; ಬೇಸಿಗೆಯಲ್ಲಿ ಮತ್ತು ಮಳೆಗಾಲದಲ್ಲಿ ಅವಕ್ಕೆ ಸೂಕ್ತವಾದ ಬಣ್ಣಗಳನ್ನು ಬಳಿದು ಉಡುಪನ್ನು ಹೋಲುವಂತೆ ಮಾಡಲಾಗುವುದು.

*

ದೆಹಲಿ ಕನ್ನಡ ಶಾಲೆಗೆ ಬಸ್ಸುಗಳು

ದೆಹಲಿ ಕನ್ನಡ ಶಾಲೆ ಮಕ್ಕಳ ಬಳಕೆಗಾಗಿ ಹಿಂದಿನ ಮೈಸೂರು ಸರಕಾರವು ಕೊಂಡ ಎರಡು ಬಸ್ಸುಗಳನ್ನು ಶೀಘ್ರದಲ್ಲೇ ಕೊಡಿಸಿಕೊಡುವುದಾಗಿ ಶಿಕ್ಷಣ ಸಚಿವ ಶ್ರೀ ಬದ್ರಿನಾರಾಯಣ್‌ರವರು ಆಶ್ವಾಸನೆ ನೀಡಿದ್ದಾರೆಂದು ಗೊತ್ತಾಗಿದೆ.

*

ದಿವ್ಯವಾಣಿ

ಮದುವೆಯು, ಪುರುಷರು ತಮ್ಮ ಸ್ವಾತಂತ್ರ್ಯವನ್ನೂ, ಸ್ತ್ರೀಯರು ತಮ್ಮ ಸುಖವನ್ನೂ ಪಣವಾಗಿಟ್ಟಿರುವ ಲಾಟರಿಯಾಗಿದೆ. — ಪಿ. ಎಂ. ನೋಲೆ

★

ನವದೆಹಲಿ— 1975 ರಲ್ಲಿ ವಿಶ್ವ ಜನಸಂಖ್ಯೆಯು ಉನ್ನತಮಟ್ಟಕ್ಕೆ ಏರಿದ ನಂತರ ಇಳಿಯಲು ಪ್ರಾರಂಭವಾಗುವುದೆಂದು ರಷ್ಯಾದಲ್ಲಿ ನಡೆಸಿದ ಸಮ್ಮೇಳನದಿಂದ ವ್ಯಕ್ತವಾಗಿದೆಯೆಂದು ಪ್ರಕಟವಾಗಿದೆ.

SHAKTI SUDHA

A Superb Tonic

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಸೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ ರವರ ಜೊಚ್ಚಲು ಚಿತ್ರ

★

ಆನೆ - ಹುಡುಗ

Potect the Cow

ವುಡ್‌ಲ್ಯಾಂಡ್ 29 9 72 ರಿಂದ
ಅಮೋಘ ಪ್ರಾರಂಭ

ರಾಜೇಂದ್ರ ಕುಮಾರ್ ಆರ್ಪಿಸುವ ರೋಸ್ ಮೂವೀಸ್‌ರವರ
ಹಿಂದಿ ಕಲರ್ ಆತ್ಯನೋಘ ಚಿತ್ರ

ಜವಾನಿ ದಿವಾನಿ

ಪಾತ್ರ : ರಣಧೀರ್ ಕಪೂರ್, ಜಯಭಾದುರಿ

ಸಂಗೀತ : ಆರ್. ಡಿ. ಬರ್ಮನ್

ದಿನ ೫ ಪ್ರದರ್ಶನಗಳು

ಅಪೆರಾ 2 ನೇ ವಾರ

ಶ್ರೀ ನವನೀತ್ ಫಿಲಂಸ್‌ರವರ ಅಮೋಘ ತಮಿಳು ಚಿತ್ರ

ಪುಗುಂದ ವೀಡು

ನಿರ್ದೇಶನ : ಪಟ್ಟು

ಪ್ರತಿ ದಿನ 3 ಪ್ರದರ್ಶನಗಳು

ಅಖಿಲ ಭಾರತದಲ್ಲಿ ಕೂಡಲೇ



ಗೋವಧೆ ನಿಶೇಧವಾಗಲಿ

Quality Printing Neat Binding

Lakshminarasimha Press

Sivarampet, Mysore

Edited Printedand Published by Dharmapracharanirata M S Krishna Rao (Propretor) at the Satvavad Press Chamarajapuram Mysore

Contribute Liberally to the National Defence Fund